ಕೊಟ್ಟಿದ್ದೇವೆ. ಈಗ ಏನಾಗಿದೆ ಎಂದರೆ ಆನೆಗಳು ತಿರುಗಾಡತಕ್ಕ ಜಾಗದಲ್ಲಿ ಎಲ್ಲಾ ಜನರು ಹೋಗಿ ವಾಸ ಮಾಡಿಕೊಂಡಿರುವುದರಿಂದ ಈ ರೀತಿಯ ಪರಿಸ್ಥಿತಿ ಉಂಟಾಗಿದೆ. ಆನೆಗಳಿಗೆ ಅಲ್ಲಿ ಎಲ್ಲಾ ಓಡಾಡಿ ಅಭ್ಯಾಸವಾಗಿ ಹೋಗಿದೆ ಇದೂ ಅಲ್ಲದೆ ಆನೆಗಳು ತಿರುಗಾಡತಕ್ಕ ಪ್ರದೇಶದಲ್ಲಿ ಅತಿಕ್ರಮಣ ಪ್ರವೇಶ ಮಾಡಿರುವುದು ಅಲ್ಲದೆ ಅಲ್ಲಿ ಎಲ್ಲಾ ಕಬ್ಬನ್ನು ಬೆಳೆಯುತ್ತಿದ್ದಾರೆ. ಇದರಿಂದಾಗಿ ಆನೆಗಳಿಗೆ ಓಪನ್ ಇನ್ವಿಟೇಷನ್ ಕೊಟ್ಟ ಹಾಗಾಗಿದೆ. ಆದುದರಿಂದ ನಾವು ಅಲ್ಲಿರತಕ್ಕವರಿಗೆ ಕಬ್ಬನ್ನು ಬೆಳೆಯ ಕೂಡದು ನಿಲ್ಲಿಸಬೇಕೆಂದು ಹೇಳಿರುತ್ತೇವೆ. ಮತ್ತೆ ಆನೆಗಳು ಊರಿನೊಳಗೆ ಬಾರದೇ ಇರುವುದಕ್ಕೋಸ್ಕರವಾಗಿ ೧೯೮೧-೮೨ರಲ್ಲಿ ೧೯.೫ ಕಿಲೋ ಮೀಟರ್ ಕಂದಕವನ್ನು ತೋಡಿದ್ದೇವೆ. ೧೯೮೨-೮೩ರಲ್ಲಿ ೩೫ ಕಿಲೋ ಮೀಟರ್‌ಗಳ ಕಂದಕವನ್ನು ತೋಡುವುದಕ್ಕಾಗಿ ೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡ ಬೇಕೆಂದು ಮಾಡಿದ್ದೇವೆ. ಇನ್ನು ಮಾನ್ಯ ಶ್ರೀ ಮಹದೇವ್ ರವರು ಏನು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ ಅದರಲ್ಲೂ ಆ ಪ್ರದೇಶಗಳಿಗೆ ವಿದ್ಯುತ್ ದೀಪದ ವ್ಯವಸ್ಥೆ ಮಾಡಬೇಕೆಂದು ಕೇಳಿದ್ದಾರೆ, ಅದರ ಬಗ್ಗೆ ಸರ್ಕಾರ ಗಮನದಲ್ಲಿಟ್ಟುಕೊಂಡು ಅವರ ಸಲಹೆಯನ್ನು ಪರಿಶೀಲಿಸುತ್ತದೆ.

ಶ್ರೀ ಕೆ. ಎಚ್. ರಂಗನಾಥ್.—ಕಾಡು ಹಂದಿಯ ಬಗ್ಗೆ ಏನಾದರೂ ವ್ಯವಸ್ಥೆ ಮಾಡಿ, ತಮಾಶೆಗಾಗಿ ನಾನು ಹೇಳುತ್ತಿಲ್ಲ.

ಶ್ರೀ ಎಂ. ಮಹದೇವ್.—೨೫-೩-೮೯ರಂದು ಹೆಡಿಯಾಲ ಗ್ರಾಮದಲ್ಲಿ ಒಬ್ಬ ಬಡವನ ಸುಮಾರು ೪೦ ತೆಂಗಿನ ಸಸಿಗಳನ್ನು ಆನೆಗಳು ಕಿತ್ತುಹಾಕಿವೆ. ಅವನು ಬಹಳ ಬಡವ. ೩-೪ ಮಕ್ಕಳು ಇದ್ದಾರೆ, ಆದುದರಿಂದ ಅವನಿಗೆ ಏನಾದರೂ ಕೂಡಲೇ ಪರಿಹಾರವನ್ನು ಕೊಡುವ ಬಗ್ಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಎ. ಜೀವಿಜಯ.—ಖಂಡಿತವಾಗಿಯೂ ಪರಿಹಾರವನ್ನು ಕೊಡಿಸುತ್ತೇನೆ.

ವಿಷಯ.—(ii) ಯಂಶವಂತಪುರದ ಬಳಿ ಮಹಿಳೆಯ ಮೇಲೆ ನಡೆಯಿತು ಎನ್ನಲಾದ ಅತ್ಯಾಚಾರದ ಬಗ್ಗೆ.

ಶ್ರೀ ಪಿ. ರಾಮದೇವ್.—ಅಧ್ಯಕ್ಷರೇ, ಇದೇ ತಿಂಗಳು ೨೦ನೇ ತಾರೀಖು ಯಶವಂತಪುರದ ಬಳಿ ಮಹಿಳೆಯ ಮೇಲೆ ನಡೆಯಿತೆನ್ನಲಾದ ಅತ್ಯಾಚಾರದ ಕುರಿತು ಮಾನ್ಯ ಮುಖ್ಯ ಮಂತ್ರಿಗಳವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿಗಜಿಣಗಿ ರಮೇಶ ಚಂದ್ರಪ್ಪ (ಮುಖ್ಯ ಮಂತ್ರಿಗಳವರ ಪರವಾಗಿ).—

ದಿನಾಂಕ ೨೦-೩-೮೯ರಂದು ರಾತ್ರಿ ಸುಮಾರು ೧೦-೩೦ರ ವೇಳೆಯಲ್ಲಿ ಎಲ್. ಸಿ. ಆರ್. ಕಾಲೋನಿಯ ನಿವಾಸಿಯೊಬ್ಬರು ತಮ್ಮ ಪತ್ನಿ, ಮಗ, ಮತ್ತು ಇನ್ನೊಬ್ಬ ವಯಸ್ಸಾದ ಮಹಿಳೆಯೊಂದಿಗೆ ಮತ್ತಿಕೆರೆ ಟೂರಿಂಗ್ ಟಾಕೀಸ್‌ನಲ್ಲಿ ಚಿತ್ರವೊಂದನ್ನು ನೋಡಿ ಹಿಂದಿರುಗಿ ಬರುತ್ತಿದ್ದರೆಂದು ವರದಿಯಾಗಿದೆ ಆಗ ಮೂವರು ವ್ಯಕ್ತಿಗಳು ಅವರ ಮೇಲೆ ಆಕ್ರಮಣ ನಡೆಸಿದರೆಂದು ತಿಳಿದು ಬಂದಿದೆ. ಹಲ್ಲೆಕಾರರು ಆ ವ್ಯಕ್ತಿಗಳ ಮೇಲೆ ಹಲ್ಲೆ ನಡೆಸಿದರೆಂದು ಮತ್ತು ಆ ವ್ಯಕ್ತಿಯ ಪತ್ನಿಯನ್ನು ಸಮೀಪದ ಶಾಲೆಗೆ ಎಳೆದೊಯ್ದು ಆಕೆಯ ಮೇಲೆ ಅತ್ಯಾಚಾರ ನಡೆಸಿದರೆಂದು ವರದಿಯಾಗಿದೆ.

ಆ ವೇಳೆಯಲ್ಲಿ ಆಕೆಯ ಪತಿಯು ಯಶವಂತಪುರ ಪೋಲೀಸ್ ಠಾಣೆಗೆ ಓಡಿ ಹೋಗಿ ಠಾಣೆಯ ಅಧಿಕಾರಿಗೆ, ಬಾಯಿ ಮಾತಿನ ದೂರನ್ನು ನೀಡಿದರು. ಠಾಣೆಯ ಅಧಿಕಾರಿಯು ಕೂಡಲೆ ರಾತ್ರಿ ಗಸ್ತಿನ ಪೋಲೀಸರಿಗೆ ಸುದ್ದಿ ತಿಳಿಸಿದರು. ಗಸ್ತಿನವರು ಕೂಡಲೆ ಸ್ಥಳಕ್ಕೆ ಧಾವಿಸಿದರು. ರಾತ್ರಿ ಸುಮಾರು ೧-೩೦ರ ವೇಳೆಗೆ ಅತ್ಯಾಚಾರಕ್ಕೆ ಒಳಗಾಗಿರುವಳೆಂದು ಹೇಳಲಾದ ಮಹಿಳೆಯನ್ನು ಮತ್ತಿಕೆರೆ ಮುಖ್ಯ ರಸ್ತೆಯಲ್ಲಿರುವ ಗಣೇಶ ದೇವಸ್ಥಾನದ ಬಳಿ ಪೋಲೀಸರು ಕಂಡರು. ಮತ್ತು ಆಪಳನ್ನು ಪೋಲೀಸ್ ಠಾಣೆಗೆ ಕರೆದೊಯ್ದರು. ಗಸ್ತು ತಿರುಗುತ್ತಿರುವ ಪೋಲೀಸರು ಆ ಪ್ರದೇಶದಲ್ಲಿ ಶೋಧನೆ ನಡೆಸಿ ಎಲ್ಲ ಆಪಾದಿತ ವ್ಯಕ್ತಿಗಳನ್ನು ಬಂಧಿಸಿದರು. ಆಪಾದಿತ ವ್ಯಕ್ತಿಗಳನ್ನು ಮತ್ತು ಅತ್ಯಾಚಾರಕ್ಕೆ ಒಳಗಾದ ಮಹಿಳೆಯನ್ನು ಆ ತರುವಾಯ ವೈದ್ಯಕೀಯ ಪರೀಕ್ಷೆಗೆ ಕಳಿಸಿಕೊಡಲಾಯಿತು.

ಅತ್ಯಾಚಾರಕ್ಕೆ ಒಳಗಾದ ಮಹಿಳೆ ನೀಡಿದ ಹೇಳಿಕೆ ಮೇಲೆ ಭಾರತೀಯ ದಂಡ ಸಂಹಿತೆಯ ೩೪ನೇ ಪ್ರಕರಣದೊಂದಿಗೆ ಓದಲಾದ ೩೭೬, ೨೨೩ನೇ ಪ್ರಕರಣಗಳ ಮೇರೆಗೆ ಅಪರಾಧ ಸಂಖ್ಯೆ ಸಿ.ಆರ್. ೧೪೮/೮೩ರಲ್ಲಿ ಒಂದು ಮೊಕದ್ದಮೆಯನ್ನು ದಾಖಲು ಮಾಡಿಕೊಳ್ಳಲಾಯಿತು.

ಆಪಾದಿತ ವ್ಯಕ್ತಿಗಳನ್ನು ೨೨-೩-೮೩ ರಂದು ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಲಾಯಿತು. ಅವರು ಈಗ ನ್ಯಾಯಾಂಗ ಅಭಿರಕ್ಷೆಯಲ್ಲಿದ್ದಾರೆ.

ಪೊಲೀಸರು ಸ್ಥಳಕ್ಕೆ ಧಾವಿಸಿ ಆಪಾದಿತ ವ್ಯಕ್ತಿಗಳನ್ನು ಬಂಧಿಸುವಲ್ಲಿ ತಕ್ಷಣವೆ ಕ್ರಮ ಕೈ ಕೊಂಡಿದ್ದಾರೆಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಸಮಾಜ ವಿರೋಧಿ ವ್ಯಕ್ತಿಗಳ ಕಾನೂನು ಬಾಹಿರ ಚಟುವಟಿಕೆಗಳನ್ನು ಹತ್ತಿಕ್ಕುವ ದೃಷ್ಟಿಯಿಂದ ಬೆಂಗಳೂರು ನಗರದಲ್ಲಿ ರಾತ್ರಿ ಗಸ್ತು ತಿರುಗುವ ಕಾರ್ಯವನ್ನು ಚುರುಕುಗೊಳಿಸಲಾಗಿದೆ.

ಶ್ರೀ ಪಿ. ರಾಮ್‌ದೇವ್.—ಅಧ್ಯಕ್ಷರೇ ಹಿಂದೆ ಲಾಲ್‌ಬಾಗ್‌ನಲ್ಲಿ ಒಂದು ರೇಪ್ ಕೇಸ್ ನಡೆದಾಗ ಆದರ ಬಗ್ಗೆ ಸರ್ಕಾರದಿಂದ ಮಾರನೆದಿನವೇ ಉತ್ತರ ಬಂತು. ಆದರೆ ಈ ಘಟನೆ ನಡೆದ ೭ ದಿವಸಗಳ ಮೇಲೆ ಈಗ ಸರ್ಕಾರದಿಂದ ಉತ್ತರ ಬರುತ್ತಿದೆ. ಇದಕ್ಕೆ ಕಾರಣವೇನು ? ಇನ್ನು ಎರಡನೆಯದಾಗಿ, ಯಾರು ಯಾರನ್ನು ಅರೆಸ್ಟ್ ಮಾಡಿದ್ದಾರೆ ಅವರ ಹೆಸರೇನು ಎಂಬುದು ಪೋಲೀಸಿನವರಿಗೆ ಗೊತ್ತಾಗಲಿಲ್ಲವೇ ? ಪತಿ, ಪತ್ನಿ ಮತ್ತು ಅವರ ಮಗ ಯಾರು ಅವರ ಹೆಸರೇನೆಂಬುದು ಪೋಲೀಸಿನವರಿಗೆ ಗೊತ್ತಾಗಲಿಲ್ಲವೇ ? ಅವರಿಗೆ ಏನಾದರೂ ರಕ್ಷಣೆ ಕೊಡುವ ದೃಷ್ಟಿಯಿಂದ ಅಥವಾ ರೇಪ್‌ಗೆ ಒಳಗಾಗಿರತಕ್ಕವರ ಹೆಸರನ್ನು ಬಯಲು ಮಾಡಬಾರದು ಎನ್ನತಕ್ಕ ದೃಷ್ಟಿಯಿಂದ ಹೇಳದಿದ್ದರೆ ಆ ಪ್ರಶ್ನೆ ಬೇರೆ. ಆದುದರಿಂದ ಅಪರಾಧಿಗಳ ಹೆಸರು ಮತ್ತು ಪತಿ ಪತ್ನಿ ಮಗ ಅವರ್ಯಾರು ಎನ್ನುವ ಮಾಹಿತಿಯನ್ನು ಒದಗಿಸಬೇಕು. ಇನ್ನು ಮೂರನೆಯದಾಗಿ ಯಶವಂತಪುರದ ಪೋಲೀಸಿನವರು ಸ್ಥಳಕ್ಕೆ ಧಾವಿಸಿ ಅಪರಾಧಿಗಳನ್ನು ತಕ್ಷಣ ಹಿಡಿದು ಕ್ರಮ ತೆಗೆದುಕೊಂಡಿದ್ದಾರೆಂದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡಿದ್ದೀರಿ. ನನಗೆ ತಿಳಿದ ಹಾಗೆ ಪತಿ ಪೋಲೀಸ್ ಸ್ಟೇಷನ್ನಿಗೆ ೧೦½ ಗಂಟೆಗೆ ಹೋಗಿ ಕಂಪ್ಲೇಂಟ್ ಕೊಟ್ಟರೆ ಪೊಲೀಸಿನವರು ಎರಡು ಗಂಟೆಗಳ ನಂತರ ಆ ಸ್ಥಳಕ್ಕೆ ಹೋಗಿ ಆ ಅಪರಾಧಿಗಳನ್ನು ಹಿಡಿದಿದ್ದಾರೆ. ಅಷ್ಟು ಹೊತ್ತಿಗೆ ಎಲ್ಲಾ ಅಪರಾಧ ಮುಗಿದು ಹೋಗಿದೆ. ಆ ಮೇಲೆ ರಕ್ಷಣೆ ಮಾಡುವುದಕ್ಕೆ ಏನು ಉಳಿದಿದೆ ? ಈ ರೀತಿಯಾಗಿ ಪೋಲೀಸಿನವರು ನಿಧಾನ ಮಾಡಿರುವುದಕ್ಕೆ ಕಾರಣವೇನು. ತಮಗೆ ಗೊತ್ತಿರಬಹುದು. ಕೆ.ಎಲ್.ರಾವ್ ಸರ್ಕಲ್ ಇನ್ಸ್‌ಪೆಕ್ಟರ್ ಟ್ರಾಫಿಕ್‌ನವರನ್ನು ಸಸ್‌ಪೆಂಡ್ ಮಾಡಿ, ಅನಂತರ ಸಸ್‌ಪೆನ್ ಷನ್‌ನನ್ನು ರಿವೋಕ್ ಮಾಡಿದ ನಂತರ ಯಶವಂತಪುರದ ಪೋಲೀಸ್ ಠಾಣೆಯಲ್ಲಿ ಪೋಲೀಸಿನವರು ಮುಷ್ಕರ ಹೂಡಿದ್ದರು. ಇದು ತಮ್ಮ ಗಮನಕ್ಕೂ ಬಂದಿದೆ. ಮುಷ್ಕರವನ್ನು ಅವರು ಆ ರೀತಿ ಹೂಡಿದುದರಿಂದ ಅಲ್ಲಿ ಶಿಸ್ತಿನ ಅಭಾವವಿಲ್ಲವೇ ಶಿಸ್ತಿನ ಅಭಾವವಿರುವುದರಿಂದಲೇ ಪೋಲೀಸಿನವರು ಯಾವ ರೀತಿಯಾಗಿ ವರ್ತನೆ ಮಾಡಬೇಕಾಗಿತ್ತೋ ಆ ರೀತಿಯಾಗಿ ವರ್ತಿಸುತ್ತಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ. ಟೂರಿಂಗ್ ಟಾಕೀಸ್‌ನಲ್ಲಿ ರಾತ್ರಿ ಪೆಟ್ರೋಲಿಂಗ್ ಹಾಕುತ್ತಾರೆ. ಪೋಲೀಸ್ ಕಾನ್‌ಸ್ಟೇಬಲ್ ಪೆಟ್ರೋಲ್ ಮಾಡತಕ್ಕದ್ದು ಇದೆ. ಅಲ್ಲಿರತಕ್ಕ ಪೊಲೀಸರು ಯಾವ ರೀತಿ ಬೀಟ್ ಮಾಡಿದ್ದಾರೆ ? ಬೀಟ್ ಮಾಡಿದ ಪೋಲೀಸರು ಯಾರು ? ಅವರು ಅಲ್ಲಿ ಘಟನೆ ನಡೆದ ತಕ್ಷಣ ಏತಕ್ಕೆ ವರದಿ ಮಾಡಲಿಲ್ಲ ? ಇದಾದ ಮೇಲೆ ವೈದ್ಯಕೀಯ ಪರೀಕ್ಷೆಗೆ ಕಳುಹಿಸಿದ್ದೇವೆಂದು ಹೇಳಿದಿರಿ ಅಲ್ಲಿಂದ ಬಂದಿರತಕ್ಕ ವರದಿ ಏನು ? ದಯಮಾಡಿ ಇದನ್ನೆಲ್ಲ ಹೇಳಬೇಕು. ಬೆಂಗಳೂರಿನಲ್ಲಿ ಸಮಾಜ ವಿರೋಧಿ ವ್ಯಕ್ತಿಗಳ ಕಾನೂನು ಬಾಹಿರ ಚಟುವಟಿಕೆಗಳನ್ನು ಹತ್ತಿಕ್ಕುವ ದೃಷ್ಟಿಯಿಂದ ರಾತ್ರಿ ಗಸ್ತು ತಿರುಗುವ ಕ್ರಮವನ್ನು ಚುರುಕುಗೊಳಿಸಲಾಗಿದೆ ಎಂದು ಹೇಳಿದ್ದಾರೆ. ಇದಾದ ಮೇಲೆ ಪ್ಲಾಟ್‌ಫಾರಂ ರಸ್ತೆಯಲ್ಲಿ ರಾಬರಿ ಆಗಿದೆ. ಅನೇಕ ಕಡೆ ಈ ರೀತಿ ಆಗಿರತಕ್ಕದ್ದು ಪತ್ರಿಕೆಗಳಲ್ಲಿ ಬಂದಿದೆ. ಇದಕ್ಕೆಲ್ಲ ಕಾರಣವೇನು ? ಈ ಹೇಳಿಕೆ ಬಂದಮೇಲೆ ರಾತ್ರಿ ಗಸ್ತು ತಿರುಗುವ ಕಾರ್ಯವನ್ನು ಚುರುಕುಗೊಳಿಸಲಾಗಿದೆಯೇ ಅಥವಾ ಇಲ್ಲವೇ ? ಚುರುಕುಗೊಳಿಸಿದ್ದರೆ ಇಂಥ ಹಲವಾರು ಘಟನೆಗಳು ಏತಕ್ಕೆ ಆಗುತ್ತಿದ್ದವು ? ಮಾಹಿತಿಯರು ರಾತ್ರಿ ಸಿನಿಮಾ ಬಿಟ್ಟಮೇಲೆ ಹೋಗುವುದಕ್ಕಾಗುತ್ತಿಲ್ಲ. ಆಂದಾಗ ನೀವು ರಾತ್ರಿ ಗಸ್ತನ್ನು ಯಾವ ರೀತಿ ಚುರುಕುಗೊಳಿಸಿದ್ದೀರಿ ?

ಶ್ರೀ ಭೀಮಣ್ಣ ಖಂಡ್ರೆ.—ನಾನು ಈ ವಿಷಯದ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿ ಸಿದ್ದುದರ ಜೊತೆಗೆ ರೂಲ್ ೬೮ರ ಕೆಳಗೆ ಮತ್ತೊಂದು ನೋಟೀಸ್ ಕೂಡ ಕಳುಹಿಸಿದ್ದೇನೆ. ಕಳೆದ ೨–೩ ತಿಂಗಳಿಂದ ಸತತವಾಗಿ ಇಂಥ ಘಟನೆಗಳು ನಡೆಯುತ್ತಿವೆ. ಬೆಂಗಳೂರಿನಲ್ಲೇ ೨–೩ ಕೇಸುಗಳು ಆಗಿವೆ. ಲಾಲ್‌ಬಾಗ್, ಯಶವಂತಪುರ, ಬಳ್ಳಾರಿ, ಶೇಷಾದ್ರಿಪುರಂ–ಮುಂತಾದ ಅನೇಕ ಕಡೆಗಳಲ್ಲಿ ಇಂಥ ಘಟನೆಗಳು ನಡೆದಿವೆ ಮುಖ್ಯವಾಗಿ, ಯಶವಂತಪುರದ ಬಳಿ ನಡೆದ ಘಟನೆಯ ಬಗ್ಗೆ ಇಂದು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಇವತ್ತು ರಾಜ್ಯದಲ್ಲಿ ಹೆಣ್ಣುಮಕ್ಕಳ ಮಾನ ಪ್ರಾಣ ದಿಕ್ಕೆಟ್ಟಿದೆ ಉಳಿಯುತ್ತಿಲ್ಲ. ಜನರ ಪ್ರಾಣ ರಕ್ಷಣೆ ಮಾಡುವುದಕ್ಕೆ ಅವಕಾಶ ಇಲ್ಲವಾಗಿದೆ. ಬಹುಶ: ಸರ್ಕಾರ ಮಲಗಿದೆ ಎಂದು ಕಾಣುತ್ತದೆ. ಜೊತೆಗೆ ಪೋಲೀಸರು ಉದಾಸೀನ ಭಾವ ತಾಳಿದ್ದಾರೆ. ಲಾಲ್‌ಬಾಗ್‌ನಲ್ಲಿ ನಡೆದ ಘಟನೆ ಬಗ್ಗೆ ಘಟನೆ ನಡೆದ ಮರುದಿನವೆ ಎಫ್ ಐ.ಆರ್ ಅನ್ನು ಕೊಟ್ಟಿದ್ದಾರೆ ಇವತ್ತು ಅದರ ಪರಿಣಾಮ ಸಾರ್ವಜನಿಕರು ಜನರ ಮೇಲೆ ಬೀರಿದೆ. ಮ್ಯಾಜಿಸ್ಟ್ರೇಟ್ ಅವರೇ ಬೇಲ್ ಮೇಲೆ ಬಿಟ್ಟಿದ್ದಾರೆ. ಆ ಕಾರಣದಿಂದ ನಾವು ಏನು ಮಾಡಿದರೂ ಏನೂ ಆಗುವುದಿಲ್ಲವೆಂದು ಸ್ಪಷ್ಟವಾಗಿದೆ. ಲಾಲ್‌ಬಾಗ್‌ನಲ್ಲಿ ಆದ ರೀತಿಯೇ ಯಶವಂತಪುರದಲ್ಲಿ ಆಗಿದೆ. 'Rape is not rape if.' ಎಂದು ಪಾರ್ಟ್ ೨ರ ಡಿಕ್ಕನ್ ಹೆರಾಲ್ಡ್‌ನಲ್ಲಿ ಬಂದಿದೆ.

ಉಪಸಭಾಪತಿಯವರು.—ಅದಕ್ಕೆ ಕೋರ್ಟ್ ಜಡ್ಜ್‌ಮೆಂಟ್ ಇರುತ್ತದೆ. ತಾವು ಈಗ ಸ್ಪಷ್ಟೀಕರಣ ಇದ್ದರೆ ಕೇಳಿ. You have drawn the attention of the Government to a series of incidents that have taken place. You may seek clarification regarding the steps taken by the Government to avoid such incidents.

ಶ್ರೀ ಭೀಮಣ್ಣ ಖಂಡ್ರೆ.—ನಾವು ಸರ್ಕಾರದ ಗಮನ ಸೆಳೆಯುವ ಉದ್ದೇಶವೇನು? ಸರ್ಕಾರಕ್ಕೆ ವಿಷಯ ತಿಳಿದಿಲ್ಲವೆಂದು ಅಲ್ಲ. ಇಲ್ಲಿ ಚರ್ಚೆ ಮಾಡುವ ಕಾರಣ ಮುಂದೆ ಈ ರೀತಿ ಆಗ ಬಾರದೆಂದು ಅಲ್ಲವೆ? ಆದ್ದರಿಂದ ಈ ವಿಷಯದ ಬಗ್ಗೆ ಪುನಃ ರೂಲ್ ೬೮ರ ಕೆಳಗೆ ನೋಟೀಸ್ ಕಳುಹಿಸಿದ್ದೇನೆ. ಏತಕ್ಕೆ ಈ ರೀತಿ ಆಗುತ್ತಿದೆ? ಪೋಲೀಸರು ಮಲಗಿ ನಿದ್ರಿಸುತ್ತಿದ್ದಾರೆಯೇ? ಮುಂದೆ ಏನಾಗುತ್ತದೆಂಬ ಭಯ ಜನರಲ್ಲಿದೆ. ಸಮಾಜದವರು ನಿರ್ವೀರ್ಯರಾಗಿದ್ದಾರೆ. ಜೊತೆಗೆ ಕೋರ್ಟ್ ಇಂಟರ್‌ಪ್ರಿಟೇಷನ್ ಏನಿದೆ ಅದಕ್ಕೆ ವಿರುದ್ಧವಾಗಿ ಇವತ್ತು ಆನಾಮತ್‌ನಲ್ಲಿ ಬಿಡುತ್ತಿದ್ದಾರೆ. ಯಾರಿಗೆ ಶಿಕ್ಷೆ ಆಗಬೇಕೋ ಅಂಥ ವರನ್ನು ಸುಮ್ಮನೆ ಬಿಡುತ್ತಿದ್ದಾರೆ. ಇದಕ್ಕೆ ಏನು ಮಾಡುತ್ತೀರಿ? ಲಾಲ್‌ಬಾಗ್‌ನಲ್ಲಿ ಸಾವಿರಾರು ಜನರ ಎದುರು ಅತ್ಯಾಚಾರ ಮಾಡಿದವನನ್ನು ಬೇಲ್ ಮೇಲೆ ಬಿಟ್ಟಿದ್ದಾರೆ. ಇದರಿಂದ ಅವನಿಗೆ ಎಷ್ಟು ಉತ್ತೇಜನ ಕೊಟ್ಟಂತಾಯಿತು? ಇದಕ್ಕೆ ಕೋರ್ಟಿನ ಒಂದು ರೆಫರೆನ್ಸ್ ಕೊಡುತ್ತೇನೆ.

ಉಪಾಧ್ಯಕ್ಷರು.—ಕೋರ್ಟಿನಲ್ಲಿ ಏನು ಮಾಡುತ್ತಾರೆಂದು ನಿಮಗೂ ಗೊತ್ತು. ಬೇಲ್ ಮೇಲೆ ಬಿಟ್ಟಿರುವುದು ತಾನೇ? ಇಲ್ಲಿ ಕೋರ್ಟಿನ ಜಡ್ಜ್‌ಮೆಂಟನ್ನು ಓದುವುದಕ್ಕೆ ಅವಕಾಶ ಇಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ಓಪನ್ ಕೋರ್ಟಿನಲ್ಲಿ ಯಾವ ರೀತಿ ರೆಫರೆನ್ಸ್ ಮಾಡುತ್ತಾರೆಂಬುದಕ್ಕೆ ಹೇಳುತ್ತಿದ್ದೇನೆ.

MR. DEPUTY SPEAKER.—Is it relevant to read the observations made by the Additional Sessions Judge?

ಶ್ರೀ ಭೀಮಣ್ಣ ಖಂಡ್ರೆ.—It is relevant, ಇದು ರಿಲವೆಂಟ್ ಮ್ಯಾಟರ್. ಏತಕ್ಕೆ ಈ ರೀತಿ ಆಗುತ್ತಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಸರ್ಕಾರದ ಗಮನಕ್ಕೆ ತರುವುದು ಈ ಮನೆಯ ಸದಸ್ಯನಾದ ನನ್ನ ಆದ್ಯ ಕರ್ತವ್ಯವಾಗಿದೆ.

> 'another circumstance to be noted is that admittedly she had a sickle nearby and the accused had no weapon with him when he came and raped her. When the sickle was very closely, she would have used that weapon in order to protect herself from the sexual assault committed by the

accused. No such attempt has been made by her. So all these circumstances render highly improbable that the accused committed sexual intercourse with her against her will or without her consent."

ಅಂದರೆ ಏನಾಯಿತು ? ಸಾವಿರಾರು ಜನ ರಸ್ತೆಯಲ್ಲಿದ್ದವರೂ ಯಾರೂ ಏನೂ ಮಾಡಲಿಲ್ಲ.

MR. DEPUTY SPEAKER.—The mind of the judge is very clear that the girl is a consenting party.

ಶ್ರೀ ಭೀಮಣ್ಣ ಖಂಡ್ರೆ.—ನಾನು ಅದೇ ಹೇಳುತ್ತಿದ್ದೇನೆ. ಈ ದೇಶದಲ್ಲಿ, ಸಮಾಜದಲ್ಲಿ ಲಾ ಇಂಟರ್‌ಪ್ರಿಟೇಷನ್ ಆಗುವಾಗ ಇದೆಲ್ಲ ನಡೆಯುತ್ತದೆ.

ಶ್ರೀ ಪಿ. ಲಕ್ಷ್ಮೀಸಾಗರ್.—ನಾನು ಒಂದು ಕ್ರಿಯಾಲೋಪ ಎತ್ತುತ್ತೇನೆ. ನ್ಯಾಯಾಲಯಗಳು ಕೊಟ್ಟಿರತಕ್ಕ ತೀರ್ಪುಗಳ ಮೇಲೆ ವ್ಯಾಖ್ಯಾನ ಮಾಡುವುದಕ್ಕೆ ಇಲ್ಲಿ ಸಾಧ್ಯವಿಲ್ಲ. ಆದ್ದರಿಂದ, ಅದು ಹೇಗಾದರೂ ಇರಲಿ ಅದಕ್ಕೆ ಬೇರೆ ಅವಕಾಶಗಳು, ಕ್ಷೇತ್ರಗಳು ಇವೆ. ಅಲ್ಲಿ ವ್ಯಾಖ್ಯಾನಗಳ ಮೇಲೆ ಟೀಕೆ ಟಿಪ್ಪಣಿ ಮಾಡುವುದಕ್ಕೆ ಅವಕಾಶ ಇದೆಯೇ ಹೊರತು ಇಲ್ಲಿ ಇಲ್ಲ ಇಲ್ಲಿರತಕ್ಕ ವಿಷಯ ಮಾನ್ಯ ಸದಸ್ಯರಾದ ರಾಮದೇವ್‌ರವರು ಏನು ಘಟನೆ ನಡೆದಿದೆ ಎಂದು ಪ್ರಸ್ತಾಪಿಸಿದ್ದಾರೆ ಪಾಪ್ತು ಅದರ ಮೇಲೆ ಸರ್ಕಾರ ಏನು ಭದ್ರತಾ ಕ್ರಮಗಳನ್ನು ತೆಗೆದುಕೊಂಡಿದೆ ಎಂಬುದಕ್ಕೆ ಸೀಮಿತವಾಗಿದೆ. ಗಮನ ಸೆಳೆಯುವ ಸೂಚನೆ ಎರಡೂವರೆ ಗಂಟೆಗಳ ಕಾಲದ ಚರ್ಚೆಯ ಹಾಗೆ ನಡೆದರೆ ಅದು ನಿಯಮಾವಳಿಗೆ ವಿರೋಧವಾಗುತ್ತದೆಂದು ಹೇಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಇದು ಪಾಸಿಂಗ್ ರೆಫರೆನ್ಸ್ ಅಷ್ಟೆ. ಇವೆಲ್ಲ ಕಾರಣಗಳಿಂದ ಇವತ್ತು ಈ ದೇಶದಲ್ಲಿ ಅರಾಜಕತೆ ನಡೆಯುತ್ತಿದೆ. 'ಅಂದರ್‌ನಗರಿ ಚೌಪತ್‌ರಾಜ್' ನಂತೆ ಇವೆಲ್ಲ ಇವೆ. ನಿಮ್ಮ ಪೋಲೀಸರು ಇವತ್ತು ಸರಿಯಾಗಿ ಎಫ್.ಐ.ಆರ್. ಗಳನ್ನು ಹಾಕುತ್ತಿದ್ದಾರೆಯೇ ? ಫೈರಿಂಗ್ ಆಗುತ್ತಿರತಕ್ಕ ಇವತ್ತಿನ ಪರಿಸ್ಥಿತಿಯಲ್ಲಿ ಪೋಲೀಸರು ನಿಮ್ಮ ಹತೋಟಿಯಲ್ಲಿದ್ದಾರೆಯೇ ಎಂದು ನಾನು ಸರ್ಕಾರವನ್ನು ಕೇಳಬಯಸುತ್ತೇನೆ. ಅನ್ಯಾಯದ ವಿರುದ್ಧ ಹೋರಾಟ ಮಾಡುವವರೇ ಈ ರೀತಿ ನಡೆದುಕೊಂಡರೆ ನೀವು ಏನು ಮಾಡುತ್ತೀರಿ ? ಸರ್ಕಾರದವರು ಈ ವಿಷಯದಲ್ಲಿ ಏನು ಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ಕೇಳುತ್ತಿದ್ದೇನೆ. What action the Gevernment will take to curb all these and to maintain the law and order ?

ಶ್ರೀ ಧರ್ಮಸಿಂಗ್.—ಮಾನ್ಯ ಸದಸ್ಯರು "ಅಂದರ್‌ನಗರಿ ಚೌಪಟ್‌ರಾಜ್" ಎಂದು ಹೇಳಿದರು; ಅದನ್ನೂ ಕೂಡ ಮಂತ್ರಿಗಳು ಕ್ಲಾರಿಫೈ ಮಾಡಲಿ.

ಶ್ರೀ ಪಿ. ರಾಮದೇವ್.—ರೇಪ್ ವಿಕ್ಟಿಮ್‌ಗಳನ್ನು 'ಪಬ್ಲಿಕ್‌ಟ್ರಯಲ್ಸ್' ಗೆ ಒಳಪಡಿಸುವುದನ್ನು ನಿಲ್ಲಿಸುವುದುಒಳ್ಳೆಯದು. ಏಕೆಂದರೆ ಅವರು ಮೊದಲೇರೇಪ್‌ಗೆ ಸಿಕ್ಕಿಸಮಾಜದಲ್ಲಿಒಂದುರೀತಿಆಘಾತವನ್ನು ಹೊಂದಿರುತ್ತಾರೆ. ಆದ್ದರಿಂದ ಅವರನ್ನು ಇನ್ ಕ್ಯಾಮೆರಾ ಟ್ರಯಲ್‌ಗೆ ಒಳಪಡಿಸುವಂತೆ ಮಾಡುವುದಕ್ಕೆ ಆಗುತ್ತದೆಯೇ ಎಂಬುದನ್ನು ಯೋಚನೆ ಮಾಡಬೇಕೆಂದು ಹೇಳುತ್ತಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ಅವರು ಓಪನ್ ಕೋರ್ಟಿನಲ್ಲಿ ಬೇಕಾದರೂ ಹೇಳಬಹುದು ಅಥವಾ ಬೇರೆ ಕಡೆ ಬೇಕಾದರೂ ಹೇಳಬಹುದು. ಅವರಿಗೆ ಆಪ್ಷನ್ ಇದೆ.

ಶ್ರೀ ಭೀಮಣ್ಣ ಖಂಡ್ರೆ.—ಸರ್ಕಾರಕ್ಕೆ ಅಂಕುಶ ಇರಬೇಕು. ಈ ಸರ್ಕಾರಕ್ಕೆ ಆದಿಲ್ಲ. ಆದಕ್ಕೇ ಈ ಪ್ರಕಾರ ಆಗುತ್ತಿದೆ. ಆದ್ದರಿಂದ ನೀವು ರಾಜೀನಾಮೆ ಕೊಡಿ ಎಂದು ಹೇಳುತ್ತಿದ್ದೇನೆ.

ಶ್ರೀ ರಮೇಶ್ ಜಿಗಜ್ಜಿಣಗಿ.—ಈ ಗಮನ ಸೆಳೆಯುವ ಸೂಚನೆ ವಿಚಾರದಲ್ಲಿ ಹಿರಿಯ ಸದಸ್ಯರಾದ ರಾಮದೇವ್ ಅವರು ಈ ಘಟನೆಯಲ್ಲಿ ಒಳಪಟ್ಟ ವ್ಯಕ್ತಿಗಳ ಹೆಸರುಗಳನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ಕೇಳಿದರು. ಆ ತರಹ ಏನೂ ಇಲ್ಲ. ಸಂತ್ರಸ್ತರ ಹೆಸರನ್ನು ಬೇಕಾದರೆ ಹೇಳುತ್ತೇನೆ. ಅದರಲ್ಲಿ ಒಬ್ಬರ ಹೆಸರು ವೆಂಕಟೇಶನ್, ಇನ್ನೊಬ್ಬರ ಹೆಸರು ಮುನಿರಾಜು, ಮತ್ತೊಬ್ಬರ ಹೆಸರು ವೆಂಕಟೇಶ್ ಎಂದು. ವಿಕ್ಟಿಮ್ ಹೆಸರು ಜಯಮ್ಮ ಎಂದು. ಸರ್ಕಾರಕ್ಕೆ ಯಾವುದೇ ವಿಷಯವನ್ನು ಮುಚ್ಚಿಡುವ ದುರುದ್ದೇಶ ಇಲ್ಲ. ಮಾನ್ಯ ರಾಮದೇವ್ ಅವರು ಪೋಲೀಸ್ ಸ್ಟೇಷ್

ನಡೆಯಿತು ಎಂದು ಹೇಳಿದರು. ಆ ತರಹ ಆಶ್ವತಂಥಪುರ ಪೋಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಪೋಲೀಸರಿಂದ ಮುಷ್ಕರ ನಡೆದಿಲ್ಲ. ಮೆಡಿಕಲ್ ರಿಪೋರ್ಟ್ ಬಗ್ಗೆ ಮಾನ್ಯ ಸದಸ್ಯರು ಕೇಳಿದರು. ಮೆಡಿಕಲ್ ರಿಪೋರ್ಟ್ ಬಂದಿದ್ದು ಇನ್ನೂ ಇನ್‌ವೆಸ್ಟಿಗೇಷನ್ ನಡೆಯುತ್ತಿರುವುದರಿಂದ ಅದರ ವಿವರ ವನ್ನು ಹೇಳುವುದಕ್ಕೆ ನಾನು ಇಷ್ಟ ಪಡುವುದಿಲ್ಲ. ಮಾನ್ಯ ಸದಸ್ಯರಾದ ಭೀಮಣ್ಣ ಖಂಡ್ರೆ ಅವರು ಲಾಲ್‌ಬಾಗಿನಲ್ಲಿ ನಡೆದ ಘಟನೆ ಬಗ್ಗೆ ಸರ್ಕಾರ ಶೀರ್ಘವಾಗಿ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಹೇಳಿದ್ದಾರೆ. ಅದು ಸರಿಯಲ್ಲ. ಲಾಲ್‌ಬಾಗ್ ಘಟನೆ ಬಗ್ಗೆ ಏನು ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕಾಗಿತ್ತೋ ಅದನ್ನು ತೆಗೆದುಕೊಂಡಿದೆ. ಯಾವ ವ್ಯಕ್ತಿ ಆ ಘಟನೆಗೆ ಸಂಬಂಧಪಟ್ಟಿದ್ದರೋ ಅವರನ್ನು ಅರೆಸ್ಟ್ ಮಾಡಿದೆ ಎಂಬುದನ್ನು ಸದನದ ಮುಂದೆ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಪುಟ್ಟಸ್ವಾಮಿ ಗೌಡ.—ನಾನು ೧೫ ದಿವಸದ ಹಿಂದೆ ಒಂದು ಗಮನ ಸೆಳೆಯುವ ಸೂಚನೆ ಯನ್ನು ಕಳುಹಿಸಿದ್ದೆ...

ಉಪಾಧ್ಯಕ್ಷರು.—ಈ ವಿಷಯವನ್ನು ನೀವು ಶೂನ್ಯ ವೇಳೆಯಲ್ಲಿ ಎತ್ತಬೇಕಾಗಿತ್ತು. ದಯವಿಟ್ಟು ಈಗ ಕುಳಿತುಕೊಳ್ಳಿ. ಈಗ ಎತ್ತುವಹಾಗಿಲ್ಲ. ನಿಯಮಾವಳಿ ಪ್ರಕಾರ ನಾವು ಕೆಲಸ ಮಾಡಬೇಕು.

LEGISLATIVE BUSINESS

Karnataka Sales Tax (Amendment) Bill, 1983.

Leave to Introduce

MR. DEPUTY SPEAKER.—I will read the recommendation of the Governor.—

> "In pursuance of the clauses (1) and (3) of Article 207 of the Constitution, I, Govind Narain, Governor of Karnataka, do hereby recommend that the Karnataka Sales Tax (Amendment) Bill, 1983 be introduced in and considered by the Karnataka Legislative Assembly."

೧೯೮೩ನೇ ಇಸವಿಯ ಕರ್ನಾಟಕ ರಾಜ್ಯ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ. ಮಾನ್ಯ ಮಂತ್ರಿಗಳು ಪ್ರಸ್ತಾವನ್ನು ಮಂಡಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಮಾನ್ಯ ಉಪಾಧ್ಯಕ್ಷರೆ, ಈ ಕೆಳಗೆಕಂಡ ವಿಧೇಯಕವನ್ನು ಮಂಡಿಸಲು ಸಭೆಯ ಅನುಮತಿ ಕೋರಿಂತ್ತೇನೆ. ಕರ್ನಾಟಕ ರಾಜ್ಯದ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೩.

ಉಪಾಧ್ಯಕ್ಷರು.—ಪ್ರಸ್ತಾವನೆ ಏನೆಂದರೆ.—"ಕರ್ನಾಟಕ ರಾಜ್ಯ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೩ನ್ನು ಮಂಡಿಸಲು ಸಭೆಯು ಅನುಮತಿ ನೀಡುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟು ಅನುಮತಿ ನೀಡಲಾಯಿತು.

ಮಾನ್ಯ ಮಂತ್ರಿಯವರು ಈಗ ದಯವಿಟ್ಟು ವಿಧೇಯಕವನ್ನು ಮಂಡಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್,— ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ರಾಜ್ಯ ಮಾರಾಟ ತೆರಿಗೆ (ತಿದ್ದು ಪಡಿ) ವಿಧೇಯಕ ೧೯೮೩, ನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ. *

---

*Annexure